ಸ್ಥಳವು ದೊರಕದ ಕಾರಣ, ನೆಲ್ಯಾಡಿ ಗ್ರಾಮದ ಸ.ನಂ.64/2ಎ ನಲ್ಲಿರುವ ಕವಾಯತ್ ಮೈದಾನಕ್ಕೆ ಕಾಯ್ದಿರಿಸಿದ 0.75 ಎಕರೆ ಸ್ಥಳದಲ್ಲಿ ಸದರಿ ಠಾಣಾ ಕಟ್ಟಡವನ್ನು ನಿರ್ಮಿಸಲು ಉದ್ದೇಶಿಸಲಾಯಿತು, ಸದರಿ ಸ್ಥಳವು ಎತ್ತರ ಪ್ರದೇಶವಾಗಿದ್ದು, ಅದನ್ನು ಸಮತಟ್ಟು ಮಾಡಲು ರೂ.3.00 ಲಕ್ಷ ಅನುದಾನದ ಅವಶ್ಯಕತೆ ಕಂಡುಬಂದುದರಿಂದ, ಸದರಿ ಕಾಮಗಾರಿಯನ್ನು ಸ್ಥಗಿತಗೊಳಿಸಲಾಗಿತ್ತು.

ಪ್ರಸ್ತುತ ರೂ.213 ಕೋಟಿ ವೆಚ್ಚದಲ್ಲಿ ರಾಜ್ಯದಲ್ಲಿ ವಸತಿಯೇತರ ಕಟ್ಟಡ ನಿರ್ಮಿಸುವ ಯೋಜನೆ (ಎನ್‌ಆರ್‌ಬಿ–2) ಸರ್ಕಾರದ ಮುಂದಿದ್ದು, ಈ ಯೋಜನೆಯಲ್ಲಿ ಉಪ್ಪಿನಂಗಡಿ ಪೊಲೀಸ್ ಠಾಣೆ ನಿರ್ಮಾಣ ಸಹ ಸೇರಿದೆ. ಹಣಕಾಸಿನ ಲಭ್ಯತೆಗೆ ಅನುಗುಣವಾಗಿ ಸದರಿ ವಸತಿ ಎನ್‌ಆರ್‌ಬಿ–2 ಯೋಜನೆಗೆ ಮಂಜೂರಾತಿ ನೀಡುವ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.

828 ಶ್ರೀ ಎಸ್.ಆರ್.ವಿಶ್ವನಾಥ್ (ಯಲಹಂಕ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಯಲಹಂಕ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ದಾಸನಪುರ ಹೋಬಳಿ, ಮಾದನಾಯಕನಹಳ್ಳಿ ಗ್ರಾಮದಲ್ಲಿ ಹೊಸದಾಗಿ ಪೊಲೀಸ್ ಠಾಣೆ ಪ್ರಾರಂಭಿಸುವ ಪ್ರಸ್ತಾವನೆ ಯಾವ ಹಂತದಲ್ಲಿದೆ;

ಆ) ಇದನ್ನು ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಡಾ: ವಿ.ಎಸ್.ಆಚಾರ್ಯ (ಗೃಹ ಸಚಿವರು) :

ಅ) ಸರ್ಕಾರದ ಪರಿಶೀಲನೆಯಲ್ಲಿದೆ.

ಆ) ಹಣಕಾಸಿನ ಲಭ್ಯತೆಯನ್ನನುಸರಿಸಿ ಇಲ್ಲಿ ಪೊಲೀಸ್ ಠಾಣೆಯನ್ನು ಪ್ರಾರಂಭಿಸಲು ಪರಿಶೀಲಿಸಲಾಗುವುದು.

857 ಶ್ರೀ ವೀರಭದ್ರಪ್ಪ ಹಾಲಹರವಿ : ಮಾನ್ಯ ನಗರಾಭಿವೃದ್ಧಿ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಬ್ಬಳ್ಳಿ–ಧಾರವಾಡ ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ ಒಟ್ಟು ಎಷ್ಟು ಕಿ.ಮೀ. ರಸ್ತೆಗಳು ಡಾಂಬರೀಕರಣಗೊಳಿಸಲಾಗಿದೆ; ಎಷ್ಟು ಕಿ.ಮೀ. ರಸ್ತೆ

ಖಡಿಕರಣಗೊಳಿಸಲಾಗಿದೆ; ಎಷ್ಟು ಕಚ್ಚಾ ರಸ್ತೆಯಾಗಿವೆ ಹಾಗೂ ಎಷ್ಟು ರಸ್ತೆಗಳು ಬಾಕಿ ಉಳಿದಿವೆ (ವಿವರ ನೀಡುವುದು);

ಆ) ಪಾಲಿಕೆಗಳು ವ್ಯಾಪ್ತಿಯಲ್ಲಿ ಮುಖ್ಯ ರಸ್ತೆಗಳಾಗಲಿ, ಇಲ್ಲವೇ ಕೂಡು ರಸ್ತೆಗಳಾಗಲಿ, ಗಟಾರುಗಳಿಲ್ಲದೇ ರಸ್ತೆಗಳು ಹಾಳಾಗುತ್ತಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಪಾಲಿಕೆಯ ವ್ಯಾಪ್ತಿಯಲ್ಲಿ ಎಲ್ಲ ರಸ್ತೆಗಳ ಪಕ್ಷದಲ್ಲಿ ಗಟಾರ ನಿರ್ಮಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ಇದಕ್ಕಾಗಿ ತಗಲುವ ಅಂದಾಜು ವೆಚ್ಚವೆಷ್ಟು; (ವಿವರ ನೀಡುವುದು);

ಶ್ರೀ ಎಸ್.ಸುರೇಶ್‌ಕುಮಾರ್ (ನಗರಾಭಿವೃದ್ಧಿ ಕಾನೂನು ಮತ್ತು ಸಂಸದೀಯ ವ್ಯವಹಾರ ಸಚಿವರು) :

ಅ) ಹುಬ್ಬಳ್ಳಿ–ಧಾರವಾಡ ಮಹಾನಗರ ವ್ಯಾಪ್ತಿಯಲ್ಲಿ ರಸ್ತೆ ಸಂಬಂಧಪಟ್ಟಂತೆ ವಿವರಗಳು ಈ ಕೆಳಕಂಡಂತಿವೆ:

ಒಟ್ಟು ಉದ್ದ	1135.74 ಕಿ.ಮೀ.
ಡಾಂಬರೀಕರಣ	674.18 ಕಿ.ಮೀ.
ಖಡೀಕರಣ	309.03 ಕಿ.ಮೀ.
ಕಚ್ಚಾ ರಸ್ತೆ	128.70 ಕಿ.ಮೀ.
ಕಾಂಕ್ರೀಟ್ ರಸ್ತೆ	23.836 ಕಿ.ಮೀ.

ಆ) ಪಾಲಿಕೆಯ ವ್ಯಾಪ್ತಿಯಲ್ಲಿ ಮುಖ್ಯ ರಸ್ತೆಗಳು ಹಾಗೂ ಕೂಡು ರಸ್ತೆಗಳು ಗಟಾರುಗಳಿಲ್ಲದೇ ಹಾಳಾಗುತ್ತಿರುವ ವಿಚಾರ ಸರಕಾರದ ಗಮನಕ್ಕೆ ಬಂದಿರುತ್ತದೆ.

ಇ) ಪಾಲಿಕೆಯ ವ್ಯಾಪ್ತಿಯಲ್ಲಿ ರಸ್ತೆಗಳ ಪಕ್ಕದಲ್ಲಿ ಗಟಾರ ನಿರ್ಮಿಸುವ ಕಾಮಗಾರಿಗಳನ್ನು ಪಾಲಿಕೆಗೆ ಆಂತರಿಕ ಸಂಪನ್ಮೂಲ ಮತ್ತು ವಿವಿಧ ಯೋಜನೆಗಳ ಅಡಿ ಲಭ್ಯವಾಗುತ್ತಿರುವ ಸಂಪನ್ಮೂಲಗಳಿಂದ ಜಾರಿಗೊಳಿಸುವಂತೆ ಸೂಚಿಸಲಾಗಿದೆ.